KARNATAK UNIVERSITY, DHARWAD
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

Examination G.A.D. Section
ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗ

"NAAC Accredited with "A" Grade 2014"

Pavate Nagar, Dharwad
ಪಾವಟೆನಗರ, ಧಾರವಾಡ

Fax No. 0837-2741928
Tel Ph No. 0836-2215269
Website : www.kud.ac.in

---

ನಂ:/ಕವಿವಿ/ಪರೀಕ್ಷಾ/ಜಿಎಡಿ/2019–20/ 1653 ದಿನಾಂಕ:22/02/2020

## ಅಧಿಸೂಚನೆ

**ವಿಷಯ:** ಎಪ್ರೀಲ್/ಮೇ 2020ರಲ್ಲಿ ಜರುಗುವ ಎಲ್ಲ ಸ್ನಾತಕ 2, 4 ಹಾಗೂ 6ನೇ ಸೆಮಿಸ್ಟರ / ನಾನ್ ಸೆಮೆಸ್ಟರ ಕೋರ್ಸಗಳ ಪರೀಕ್ಷಾ ಫಾರ್ಮ/ ಶುಲ್ಕ ತುಂಬುವ ಕುರಿತು.

*****

ಎಲ್ಲ ಸ್ನಾತಕ (ಪದವಿಯ) 2, 4 ಹಾಗೂ 6ನೇ ಸೆಮಿಸ್ಟರ/ನಾನ್ ಸೆಮೆಸ್ಟರ ಕೋರ್ಸಗಳ ಪರೀಕ್ಷೆಗಳು ಎಪ್ರೀಲ್/ಮೇ 2020ರಲ್ಲಿ ಜರುಗುವವು. ಸದರಿ ಪರೀಕ್ಷೆಗಳ ವಿವರವಾದ ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು. ಹಾಗೂ ಕವಿವಿ ಅಂರ್ತಜಾಲ (**www.kud.ac.in (Notification)** ದಲ್ಲಿ ಬಿಡಲಾಗುವುದು.

ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ ಅಂರ್ತಜಾಲ ಮೂಲಕ ಪರೀಕ್ಷಾ ಫಾರ್ಮ/ಶುಲ್ಕಗಳನ್ನು ತುಂಬಿಸಿಕೊಳ್ಳುವಾಗ ಈ ಕೆಳಗಿನ ವಿವರವಾದ ಸೂಚನೆಗಳನ್ನು ಹಾಗೂ ಕೊನೆಯ ದಿನಾಂಕ ಗಮನಿಸಬೇಕು. ಪರೀಕ್ಷಾ ವಿಭಾಗಕ್ಕೆ ಅರ್ಜಿಗಳನ್ನು ಸಲ್ಲಿಸುವಾಗ ಪಾವತಿಸಿದ ಮೂಲ ಚಲನ ಪ್ರತಿ ಹಾಗೂ ಅಗತ್ಯ ದಾಖಲೆಗಳ ಝುರಾಕ್ಸ ಪ್ರತಿಗಳನ್ನು ಲಗತ್ತಿಸಿ ಸಲ್ಲಿಸಬೇಕು.

1. ದಿನಾಂಕ:24/02/2020 ರಿಂದ ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು ಮಹಾವಿದ್ಯಾಲಯದಿಂದ ಅಥವಾ ಕವಿವಿ ಅಂರ್ತಜಾಲ (**www.kud.ac.in (Notification)** ದಿಂದ ಪಡೆದುಕೊಂಡು, ಅಂರ್ತಜಾಲ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಮಹಾವಿದ್ಯಾಲಯಕ್ಕೆ ದಂಡವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:12/03/2020 (ಮಹಾವಿದ್ಯಾಲಯದವರು ಅಂರ್ತಜಾಲದಲ್ಲಿ ಅರ್ಜಿಗಳನ್ನು ದಿನಾಂಕ:16/03/2020 ರ ಒಳಗಾಗಿ ಭರ್ತಿ ಮಾಡಬೇಕು)
2. ವಿದ್ಯಾರ್ಥಿಗಳು ₹ 165/– ದಂಡದೊಂದಿಗೆ ಪರೀಕ್ಷಾ ಶುಲ್ಕವನ್ನು ಅಂರ್ತಜಾಲದ ಮೂಲಕ ಪರೀಕ್ಷಾ ಶುಲ್ಕ ಭರಿಸಿ ಮಹಾವಿದ್ಯಾಲಯಕ್ಕೆ ಸದರಿ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ:18/03/2020 (ಮಹಾವಿದ್ಯಾಲಯದವರು ಅಂರ್ತಜಾಲದಲ್ಲಿ ಅರ್ಜಿಗಳನ್ನು ದಿನಾಂಕ:20/03/2020 ರ ಒಳಗಾಗಿ ಭರ್ತಿ ಮಾಡಬೇಕು)
3. ಮಹಾವಿದ್ಯಾಲಯಗಳ ಪ್ರಾಚಾರ್ಯರು ದಂಡವಿಲ್ಲದೇ ಸ್ವೀಕರಿಸಿದ ಅರ್ಜಿಗಳನ್ನು ಹಾಗೂ ಅಂರ್ತಜಾಲದ ಮೂಲಕ ತುಂಬಿದ ಶುಲ್ಕದ ರಶೀದಿಗಳನ್ನು ಯಾದಿಗಳ ಜೊತೆಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ:19/03/2020
4. ಮಹಾವಿದ್ಯಾಲಯಗಳ ಪ್ರಾಚಾರ್ಯರು ದಂಡದೊಂದಿಗೆ ಸ್ವೀಕರಿಸಿದ ಅರ್ಜಿಗಳನ್ನು ಹಾಗೂ ಅಂರ್ತಜಾಲದ ಮೂಲಕ ತುಂಬಿದ ಶುಲ್ಕದ ರಶೀದಿಗಳನ್ನು ಯಾದಿಗಳ ಜೊತೆಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವ ಕೊನೆಯ ದಿನಾಂಕ:23/03/2020

### ಎಲ್ಲಾ ಸ್ನಾತಕ ಸೆಮೆಸ್ಟರ/ನಾನ್ ಸೆಮೆಸ್ಟರ ಕೋರ್ಸಗಳ ಪರೀಕ್ಷಾ ಶುಲ್ಕ ವಿವರ

| ಅ.ನಂ. | ವಿವರ | ಶುಲ್ಕ ₹ |
|---|---|---|
| 01 | ಅಂರ್ತಜಾಲದ ಪರೀಕ್ಷಾ ಅರ್ಜಿ ಪ್ರಕ್ರಿಯೆ ಶುಲ್ಕ | 90/– |
| 02 | ಅಂಕಪಟ್ಟಿ ಶುಲ್ಕ | 130/– |
| 03 | ಉತ್ತೀರ್ಣ ಪ್ರಮಾಣ ಪತ್ರದ ಶುಲ್ಕ (ಕೊನಯ ಸೆಮೆಸ್ಟರ / ನಾನ್ ಸೆಮೆಸ್ಟರಗೆ ಮಾತ್ರ) | 175/– |
| 04 | **ಪರೀಕ್ಷಾ ಶುಲ್ಕ:** ಪ್ರೋಜೆಕ್ಟ /ಫೀಲ್ಡ ವರ್ಕ ರಿಪೋರ್ಟ ಮೌಲ್ಯಮಾಪನ/ವೈವಾ ಶುಲ್ಕ ಬಿ.ಎಸ್.ಡಬ್ಲ್ಯೂ/ಬಿ.ಬಿಎ/ಬಿ.ಸಿ.ಎ/ಬಿ.ಕಾಂ.(ಸಿ.ಎಸ್)/ಬಿ.ಬಿಎ.(ಎಚ್ ಮತ್ತು ಟಿ)– 5ನೇ ಸೆಮೆಸ್ಟರ. ಮತ್ತು ಬಿ.ಎಸ್ಸಿ.(ಸಿ.ಎಸ್)– 6ನೇ ಸೆಮೆಸ್ಟರ. ಪ್ರತಿ ಸೆಮೆಸ್ಟರಗೆ ₹ 485/– | 485/– |
| ಅ.ನಂ. | ವಿವರ | ಶುಲ್ಕ ₹ |

| | | |
|---|---|---|
| 05 | **ಪರೀಕ್ಷಾ ಶುಲ್ಕ:** ಬಿ.ಎ./ ಬಿ.ಎಸ್ಸಿ. /ಬಿ.ಕಾಂ. 2, 4, ಮತ್ತು 6ನೇ ಸೆಮಿಸ್ಟರ.<br>1 ಪೇಪರ ₹ 220/–, 2 ಪೇಪರ ₹ 440/–, 3 ಪೇಪರ ₹ 660/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 715/– | 715/– |
| | **ಪರೀಕ್ಷಾ ಶುಲ್ಕ:** ಬಿ.ಎ (ಐ.ಎಲ್.ಆರ್.ಡಿ) ಭಾಗ–1, 2 ಮತ್ತು 3 ನಾನ್ ಸೆಮಿಸ್ಟರ<br>1 ಪೇಪರ ₹ 220/–, 2 ಪೇಪರ ₹ 440/–, 3 ಪೇಪರ ₹ 660/–, 4ಕ್ಕಿಂತ ಮೇಲ್ಪಟ್ಟು ಪ್ರತಿ ನಾನ್‌ಸೆಮಿಸ್ಟರಗೆ ₹ 715/– | 715/– |
| | **ಪರೀಕ್ಷಾ ಶುಲ್ಕ:** ಬಿ.ಎಸ್.ಡಬ್ಲ್ಯೂ 2, 4, ಮತ್ತು 6ನೇ ಸೆಮಿಸ್ಟರ.<br>1 ಪೇಪರ ₹ 230/–, 2 ಪೇಪರ ₹ 460/–, 3 ಪೇಪರ ₹ 690/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 880/– | 880/– |
| | **ಪರೀಕ್ಷಾ ಶುಲ್ಕ:** ಬಿಬಿಎ/ಬಿ.ಸಿ.ಎ/ಬಿ.ಕಾಂ.(ಸಿಎಸ್)/ಬಿ.ಎಸ್ಸಿ.(ಸಿಎಸ್)/ಬಿ.ಟಿ.ಎ./ಬಿ.ಎ.ಎಸ್.ಎಲ್.ಪಿ.–2, 4, ಮತ್ತು 6ನೇ ಸೆಮಿಸ್ಟರ.<br>1 ಪೇಪರ ₹ 270/–, 2 ಪೇಪರ ₹ 540/–, 3 ಪೇಪರ ₹ 810/–, 4 ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 945/– | 945/– |
| | **ಪರೀಕ್ಷಾ ಶುಲ್ಕ:** ಬಿ.ಬಿ.ಎ. (ಹೋಟೆಲ್ ಮತ್ತು ಟೂರಿಸಂ)– 2, 4, ಮತ್ತು 6ನೇ ಸೆಮಿಸ್ಟರ.<br>1 ಪೇಪರ ₹ 310/–, 2 ಪೇಪರ ₹ 620/–, 3 ಪೇಪರ ₹ 930/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 1280/– | 1280/– |
| | **ಪರೀಕ್ಷಾ ಶುಲ್ಕ:** ಬಿ.ಪಿ.ಎಡ್.– 2, 4, ಮತ್ತು 6ನೇ ಸೆಮಿಸ್ಟರ.<br>1 ಪೇಪರ ₹ 355/–, 2 ಪೇಪರ ₹ 710/–, 3 ಪೇಪರ ₹ 1065/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 1620/– | 1620/– |
| | **ಪರೀಕ್ಷಾ ಶುಲ್ಕ:** ಬಿ.ಎಫ್.ಎ. ನಾನ್ ಸೆಮಿಸ್ಟರ/ ಬಿ.ವಿ.ಎ– 2, 4, ಮತ್ತು 6ನೇ ಸೆಮಿಸ್ಟರ.<br>1 ಪೇಪರ ₹ 300/–, 2 ಪೇಪರ ₹ 600/–, 3 ಪೇಪರ ₹ 900/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 1105/– | 1105/– |
| | **ಪರೀಕ್ಷಾ ಶುಲ್ಕ:** ಬಿ.ಮ್ಯೂಸಿಕ್–ನಾನ್ ಸೆಮಿಸ್ಟರ /ಬಿ.ಮ್ಯೂಸಿಕ್ 2, 4, ಮತ್ತು 6ನೇ ಸೆಮಿಸ್ಟರ.<br>1 ಪೇಪರ ₹ 250/–, 2 ಪೇಪರ ₹ 500/–, 3 ಪೇಪರ ₹ 750/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 775/– | 775/– |
| | **ಪರೀಕ್ಷಾ ಶುಲ್ಕ:** ಬಿ.ಎ.ಎಸ್ಸಿ(ಪಲ್ಪ ಮತ್ತು ಪೇಪರ ಸಾಯನ್ಸ) ಭಾಗ – 1, 2, 3 ಮತ್ತು 4 ನಾನ್ ಸೆಮಿಸ್ಟರ<br>1 ಪೇಪರ ₹ 250/–, 2 ಪೇಪರ ₹ 500/–, 3 ಪೇಪರ ₹ 750/–, 4ಕ್ಕಿಂತ ಮೇಲ್ಪಟ್ಟು ಪ್ರತಿ ನಾನ್‌ಸೆಮಿಸ್ಟರಗೆ ₹ 775/– | 775/– |
| | **ಪರೀಕ್ಷಾ ಶುಲ್ಕ:** 3 ವರ್ಷದ– ಎಲ್.ಎಲ್.ಬಿ. 1 ರಿಂದ 6ನೇ ಸೆಮಿಸ್ಟರ.<br>5 ವರ್ಷದ– ಬಿ.ಎ. ಎಲ್.ಎಲ್.ಬಿ. 1 ರಿಂದ 10ನೇ ಸೆಮಿಸ್ಟರ.<br>1 ಪೇಪರ ₹ 255/–, 2 ಪೇಪರ ₹ 510/–, 3 ಪೇಪರ ₹ 765/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 820/– | 820/– |
| 06 | **ಅಂಕ ಸುಧಾರಣೆ : ಸ್ನಾತಕ (ಯು.ಜಿ) ಕೋರ್ಸಗಳಿಗೆ**<br>ಅ) **ಮೊದಲನೆಯ ಸಲ:** 1 ಪೇಪರ ₹ 500/–, 2 ಪೇಪರ ₹ 1000/–, 3 ಪೇಪರ ₹ 1500/–, 4ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 1770/– | 1770/– |
| | ಬ) **ಎರಡನೆಯ ಸಲ:** 1 ಪೇಪರ ₹ 705/–, 2 ಪೇಪರ ₹ 1410/–, 3ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 1950/– | 1950/– |
| | ಕ) **ಮೂರನೆಯ ಸಲ:** 1 ಪೇಪರ ₹ 995/–, 2 ಪೇಪರ ₹ 1990/–, 3ಕ್ಕಿಂತ ಮೇಲ್ಪಟ್ಟು ಪ್ರತಿ ಸೆಮಿಸ್ಟರಗೆ ₹ 2480/– | 2480/– |

## ವಿಶೇಷ ಸೂಚನೆಗಳು

1. ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯ ಎಲ್ಲ ಮಾಹಾವಿದ್ಯಲಯಗಳು ಪ್ರತಿ ಶೈಕ್ಷಣಿಕ ವರ್ಷಕ್ಕೆ ಸಂಯೋಜನೆಯನ್ನು ಪಡೆಯುವದು ಕಡ್ಡಾಯವಾಗಿರುತ್ತದೆ. ಕೆಲವೊಂದು ಮಹಾವಿದ್ಯಾಲಯಗಳಿಂದ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೇ ವಿದ್ಯಾರ್ಥಿಗಳ ಪ್ರವೇಶ ಯಾದಿಯನ್ನು ಹಾಗೂ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಿರುವುದನ್ನು ಗಮನಿಸಲಾಗಿದೆ ಸಂಯೋಜನೆಯ ಅಧಿಸೂಚನೆಯನ್ನು ಪಡೆಯದೆ ಇದ್ದಲ್ಲಿ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಕ್ರಮಗಳನ್ನು ಮುಂದುವರೆಸುವದಕ್ಕೆ/ವಿಸ್ತರಿಸುವದಕ್ಕೆ ಮಾನ್ಯತೆ ಇರುವುದಿಲ್ಲ ಹಾಗೂ ಅಂತಹ ಮಹಾವಿಹ್ಯಾಲಯಗಳ ವಿದ್ಯಾರ್ಥಿಗಳು ಪರೀಕ್ಷೆಗೆ ಅರ್ಜಿ ತುಂಬಲು ಸಹ ಅರ್ಹರಿರುವುದಿಲ್ಲ. ಆದ್ದರಿಂದ ಪರೀಕ್ಷಾ ಅರ್ಜಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವಾಗ ಸಿಡಿಸಿ/ಸಂಯೋಜನೆ ವಿಭಾಗದಿಂದ ಪಡೆದ ಪ್ರಸಕ್ತ ವರ್ಷದ ಅಧಿಸೂಚನೆಯನ್ನು ಕಡ್ಡಾಯವಾಗಿ ಲಗತ್ತಿಸುವದು.
2. ಸರಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ–2), ಕರ್ನಾಟಕ ಸರಕಾರದ ಸಚಿವಾಲಯ, ಬಹುಮಹಡಿ ಕಟ್ಟಡ ಇವರ ಪತ್ರ ನಂ.ಇಡಿ 13 ಯುಕೆಎಸ್ 2014 ದಿನಾಂಕ 16.01.2015ರಲ್ಲಿ ಎಲ್ಲ ಪದವಿ ಕೋರ್ಸಗಳನ್ನು ಪೂರ್ಣಗೊಳಿಸುವ ಗರಿಷ್ಠ ಅವಧಿಯನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಸ್ತುತ ಜಾರಿಯಲ್ಲಿರುವ ನಿಯಮದಂತೆ (Resolution) "ಎಲ್ಲ ವಿದ್ಯಾರ್ಥಿಗಳು ಒಂದು ವರ್ಷದ ಅವಧಿಯ ಪದವಿಯನ್ನು ಮೂರು ವರ್ಷಗಳೊಳಗಾಗಿ ಮತ್ತು ಇತರೆ ಪದವಿಗಳ ವಿದ್ಯಾರ್ಥಿಗಳು ತಮ್ಮ ಪದವಿಯನ್ನು **double the duration of the course**ನ ಒಳಗಾಗಿ ಪೂರ್ಣಗೊಳಿಸಲು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಕ್ರಮವಹಿಸುವಂತೆ ನಿರ್ದೇಶಿಸಿರುತ್ತಾರೆ." ಅದರಂತೆ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು ಕ್ರಮ ಜರುಗಿಸುವಂತೆ ಮಾನ್ಯ ಕುಲಪತಿಗಳು ದಿನಾಂಕ: 16–02–2015ರಲ್ಲಿ ಆದೇಶಿಸಿರುತ್ತಾರೆ.

**3. ಕವಿವಿ ವ್ಯಾಪ್ತಿಯ ಅದೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ/ ಸಂಯೋಜಕರಿಗೆ ತಿಳಿಸುವದೇನೆಂದರೆ, ಎಲ್ಲ 1ವರ್ಷದ ಪದವಿಯನ್ನು 3 ವರ್ಷದೊಳಗಾಗಿ ಹಾಗೂ 3 ವರ್ಷದ ಪದವಿಯನ್ನು 6 ವರ್ಷದೊಳಗಾಗಿ ಪೂರ್ಣಗೊಳಿಸಲು ವಿದ್ಯಾರ್ಥಿಗಳಿಗೆ ತಿಳಿಸುವುದು. ಅದಕ್ಕಿಂತ ಪೂರ್ವದಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಫಾರ್ಮ ತುಂಬಲು ಮತ್ತು ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ನೀಡಬಾರದೆಂದು ತಿಳಿಸಲಾಗಿದೆ.**

## ಸೂಚನೆಗಳು

1. ಅಂತರ್ಜಾಲದ (ಆನ್ ಲೈನ) ಪರೀಕ್ಷಾ ಅರ್ಜಿಗಳನ್ನು ಸಂಬಂಧಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ಈ ಮುಂದಿನ ಷರುತ್ತುಗಳಿಗೆ ಒಳಪಟ್ಟು ಸಹಿ ಮಾಡಬೇಕು. ಪ್ರತಿ ಸೆಮಿಸ್ಟರ/ನಾನ್ ಸೆಮಿಸ್ಟರ ಪ್ರತಿ ವಿಷಯದಲ್ಲೂ ಕನಿಷ್ಠ 75% ಹಾಜರಾತಿಯನ್ನು ಪೂರೈಸದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅರ್ಜಿ ನಮೂನೆಗಳನ್ನು ರದ್ದುಪಡಿಸುವ ಷರುತ್ತುಗಳಿಗೆ ಒಳಪಟ್ಟಿರುತ್ತದೆ. ಮಹಾವಿದ್ಯಾಲಯಗಳ ಪ್ರಾಚಾರ್ಯರ ಕೋರಿಕೆಯ ಮೇರೆಗೆ ಅಂತಹ ವಿದ್ಯಾರ್ಥಿಗಳಿಗಳ ಪರೀಕ್ಷೆಯ ಪ್ರವೇಶ ಪತ್ರಗಳನ್ನು (ಹಾಲ್ ಟಿಕೆಟ) ಫ್ರೀಜ್/ ತಡೆಹಿಡಿಯಲಾಗುತ್ತದೆ. ಅಂತಹ ವಿದ್ಯಾರ್ಥಿಗಳಿಗೆ ಅಂತರ್ಜಾಲದಲ್ಲಿ ಭರ್ತಿ ಮಾಡಿದ ಪರೀಕ್ಷಾ ಅರ್ಜಿಯ ಆಧಾರದ ಮೇಲೆ ಪರೀಕ್ಷೆ ಬರೆಯಲು ಅವಕಾಶ ನೀಡುವದಿಲ್ಲ. ಯು.ಜಿ.ಸಿ ನಿಯಮಗಳ ಪ್ರಕಾರ ವಿದ್ಯಾರ್ಥಿಗಳು ಕಡ್ಡಾಯವಾಗಿ 75% ರಷ್ಟು ಹಾಜರಾತಿಯನ್ನು ಪೂರೈಸಿರಬೇಕು.

2. ಪರೀಕ್ಷಾ ಶುಲ್ಕದ ಜೊತೆಗೆ. ಪ್ರತಿ ವಿದ್ಯಾರ್ಥಿಯು ರೂ. 90/-ನ್ನು ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಯ ಪ್ರಕ್ರೀಯೆ ಶುಲ್ಕವನ್ನು (ಪ್ರತಿ ಸೆಮಿಸ್ಟರಗೆ) ಮತ್ತು ರೂ. 130/-ನ್ನು ಅಂಕಪಟ್ಟಿ ಶುಲ್ಕವೆಂದು ಪಾವತಿಸಬೇಕಾಗುತ್ತದೆ. ಅಂತಿಮ ವರ್ಷ/ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ (ಕಾನೂನು ವಿದ್ಯಾರ್ಥಿಗಳನ್ನು ಹೊರತುಪಡಿಸಿ) ಮೇಲಿನ ಶುಲ್ಕದೊಂದಿಗೆ ತೇರ್ಗಡೆ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ರೂ. 175/-ನ್ನು ಪಾವತಿಸಬೇಕಾಗುತ್ತದೆ. ಕಾನೂನು ವಿದ್ಯಾರ್ಥಿಗಳು ತಮ್ಮ ಕೋರ್ಸ ಮುಗಿದ ನಂತರ ತೇರ್ಗಡೆ ಪ್ರಮಾಣ ಪತ್ರ ಮತ್ತು ವಿಶೇಷ ಪ್ರಮಾಣ ಪತ್ರವನ್ನು ಅಗತ್ಯ ಶುಲ್ಕವನ್ನು ಭರಿಸಿ ಪಡೆಯಬಹುದು.

3. ಸ್ನಾತಕ ಪದವಿ ಪ್ರವೇಶ ಪಡೆದ ಎಸ್.ಸಿ./ಎಸ್.ಟಿ/ಕೆ-1 ವಿದ್ಯಾರ್ಥಿಗಳಿಗೆ ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಪರೀಕ್ಷಾ ಶುಲ್ಕವನ್ನು ವಿನಾಯಿತಿ ನೀಡಬೇಕು. ಸರ್ಕಾರದ ಆದೇಶ ಸಂ. ಸಕಇ/178/ಪಕವಿ/2015, ಬೆಂಗಳೂರು ದಿನಾಂಕ: 31.12.2015ದರ ಅನ್ವಯ ಪರೀಕ್ಷಾ ಶುಲ್ಕವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ವರ್ಷಕ್ಕೊಮ್ಮೆ ಮರು ಪಾವತಿಸುತ್ತಾರೆ. ಅದರನ್ವಯ ನಿಯಮಿತ (Regular) ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷಾ ಶುಲ್ಕ ವಿನಾಯಿತಿ ನೀಡಬೇಕು. ಅನುತ್ತೀರ್ಣರಾದ (Repeater) ವಿದ್ಯಾರ್ಥಿಗಳಿಗೆ / ಸಪ್ಲಿಮೆಂಟರಿ ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ / ಕೊನೆಯ ವರ್ಷ/ ಸೆಮಿಸ್ಟರ ವ್ಯಾಸಂಗ ಮುಗಿಸಿದ ನಂತರ ಯಾವುದೇ ಸೆಮಿಸ್ಟರನ ವಿಷಯಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಲ್ಲಿ ವಿನಾಯಿತಿ ನೀಡಬಾರದು. ಅಂತಹ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಮಂಜೂರಾತಿ / ಮರು ಪಾವತಿಗೆ ಅರ್ಹರಲ್ಲ. ಪರೀಕ್ಷಾ ಶುಲ್ಕವನ್ನು ವಿನಾಯಿತಿ ತೆಗೆದುಕೊಂಡ ನಿಯಮಿತ ವಿದ್ಯಾರ್ಥಿಗಳು ಕಡ್ಡಾಯವಾಗಿ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಬೇಕು. ಹಾಗೂ ಅರ್ಜಿಯಲ್ಲಿ ವಿನಾಯಿತಿ ಪಡೆದ ಪರೀಕ್ಷಾ ಶುಲ್ಕವನ್ನು ನಮೂದಿಸಲು ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಬೇಕು ಹಾಗೂ ನಮೂದಿಸಿದ್ದನ್ನು ಪರಿಶೀಲಿಸಬೇಕು. ಶೀಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷಾ ಶುಲ್ಕವನ್ನು ವಿನಾಯಿತಿ ನೀಡಬೇಕು. ಒಂದು ವೇಳೆ ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನ ಮಂಜೂರಾತಿ ಆಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ಭರಿಸಿಕೊಳ್ಳಬೇಕು. ಬೇರೆ ಯಾವುದೇ ಸರ್ಕಾರ ಮತ್ತು ಸರ್ಕಾರೇತರ ಮೂಲಗಳಿಂದ ಈಗಾಗಲೇ ಶುಲ್ಕ ಮರುಪಾವತಿ ಪಡೆದಿದ್ದಲ್ಲಿ ಅಂತಹವರು ಪುನ: ಈ ಯೋಜನೆಯಡಿ ಶುಲ್ಕ ಮಂಜೂರಾತಿ/ಮರುಪಾವತಿಗೆ ಅರ್ಹರಿರುವುದಿಲ್ಲ. ಈ ಮೇಲಿನ ವಿಷಯವನ್ನು ಎಲ್ಲ ಮಹಾವಿದ್ಯಾಲಯದ ಪ್ರಾಚಾರ್ಯರು ಕಡ್ಡಾಯವಾಗಿ ಅನುಸರಿಸಬೇಕು. ತಪ್ಪಿದಲ್ಲಿ ಅಂತಹ ಮಹಾವಿದ್ಯಾಲಯದಿಂದ ಪರೀಕ್ಷಾ ಶುಲ್ಕವನ್ನು ಭರಿಸಿಕೊಳ್ಳಬೇಕಾಗುತ್ತದೆ. ಪರೀಕ್ಷಾ ಶುಲ್ಕಗಳನ್ನು ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದಿಂದ ಪಡೆದು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಬೇಕು.

   " ಎಸ್.ಸಿ./ಎಸ್.ಟಿ/ಕೆ-1 ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ.2,50,000/- "

4. ಸ್ನಾತಕ ಪದವಿ ಪ್ರವೇಶ ಪಡೆದ ಹಿಂದುಳಿದ ವರ್ಗಗಳ (2ಎ/2ಬಿ/3ಎ/3ಬಿ.ಇತರೆ) ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ. 1,00,000/- ವರೆಗೆ ಆದಾಯ ಹೊಂದಿರುವ, ಕಡಿಮೆ ಆದಾಯದ ಗುಂಪುಗಳ ವಿದ್ಯಾರ್ಥಿಗಳಿಗೆ (ಸರ್ಕಾರಿ ಆದೇಶ ಸಂಖ್ಯೆ. ಹಿವಇ/397/ ಬಿಎಂಎಸ್/2013/ಬೆಂಗಳೂರು ದಿನಾಂಕ:05/09/2013, ಸರ್ಕಾರಿ ಆದೇಶ ಸಂಖ್ಯೆ: ಹಿಂವಕ/589/ಬಿಎಂಎಸ್/2013/ಬೆಂಗಳೂರು ದಿನಾಂಕ:06/08/2014.) ಪರೀಕ್ಷೆಯ ಶುಲ್ಕದಿಂದ ವಿನಾಯಿತಿ ನೀಡಲಾಗುತ್ತದೆ. ಸದರಿ ವಿದ್ಯಾರ್ಥಿಗಳು ವಿದ್ಯಾಸಿರಿ ಯೋಜನೆ ಹಾಗೂ ಇತರೆ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವಾಗ ಪರೀಕ್ಷಾ ಶುಲ್ಕವನ್ನು ಶಿಷ್ಯವೇತನದ ಅರ್ಜಿಯಲ್ಲಿ ನಮೂದಿಸಲು ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಬೇಕು ಹಾಗೂ ನಮೂದಿಸಿದ್ದನ್ನು ಪರಿಶೀಲಿಸಬೇಕು. ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಪರೀಕ್ಷಾ

ಶುಲ್ಕವನ್ನು ವಿನಾಯಿತಿ ನೀಡಬೇಕು. ಒಂದು ವೇಳೆ ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಇಲಾಖೆಯಿಂದ ಶಿಷ್ಯವೇತನ ಮಂಜೂರಾತಿ ಆಗದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕವನ್ನು ತುಂಬಿಸಿಕೊಳ್ಳಬೇಕು. ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಅನುತ್ತೀರ್ಣಗೊಂಡ ವಿಷಯದ ಪರೀಕ್ಷಾ ಶುಲ್ಕದಲ್ಲಿ ಯಾವುದೇ ವಿನಾಯಿತಿ ಇರುವುದಿಲ್ಲ. ಪರೀಕ್ಷಾ ಶುಲ್ಕಗಳನ್ನು ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದಿಂದ ಪಡೆದು ವಿಶ್ವವಿದ್ಯಾಲಯಕ್ಕೆ ಕಳುಹಿಸಬೇಕು.

"ಅ) ಕೆಟಗೇರಿ–1ರ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ.2,50,000/-

ಆ) 2ಎ, 2ಬಿ, 3ಎ, 3ಬಿ, ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ. 1,00,000/-"

5. ವಿದ್ಯಾರ್ಥಿಯು ಕುಷ್ಠರೋಗಿಯಾಗಿದ್ದರೆ ರೋಗಿಯ ಅವಲಂಬಿಸಿದವರು, ಅಗತ್ಯ ಪ್ರಮಾಣಪತ್ರವನ್ನು ಸಂಬಂಧದ ಪುರಾವೆಯಾಗಿ ಸಲ್ಲಿಸಬೇಕು. ಕುಷ್ಠರೋಗಿಯ ವೈದ್ಯಕೀಯ ಪ್ರಮಾಣಪತ್ರವನ್ನು ಪ್ರಾಥಮಿಕ/ತಾಲ್ಲೂಕು/ಜಿಲ್ಲಾ ವೈದ್ಯಕೀಯ ಅಧಿಕಾರಿಗಳಿಂದ ಪಡೆಯಬೇಕು ಮತ್ತು ಪರೀಕ್ಷಾ ಶುಲ್ಕವನ್ನು ಪಾವತಿಸದಂತೆ ವಿದ್ಯಾರ್ಥಿಗೆ ವಿನಾಯಿತಿ ನೀಡಲಾಗುತ್ತದೆ. ಅಂತಹ ವಿನಾಯಿತಿ ನೀಡಿದ ಶುಲ್ಕಗಳನ್ನು ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರದಿಂದ ಸಂಬಂಧಪಟ್ಟ ಮಹಾವಿದ್ಯಾಲಯಗಳು ಪಡೆದು ನಂತರ ಅಂತಹ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡಬೇಕು.

6. ವಿಶ್ವವಿದ್ಯಾಲಯವು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಬರುವ ಯಾವುದೇ ಪರೀಕ್ಷಾ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ/ಪರಿಗಣಿಸಲಾಗುವದಿಲ್ಲ. ಅಲ್ಲದೆ, ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ವಿದ್ಯಾರ್ಥಿಗಳು ಭರ್ತಿಮಾಡಲು ನೇರವಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸದಿರಲು ವಿದ್ಯಾರ್ಥಿಗಳಿಗೆ ತಿಳಿಸಲು ಎಲ್ಲಾ ಕಾಲೇಜುಗಳ ಪ್ರಾಚಾರ್ಯರಿಗೆ ಸೂಚಿಸಲಾಗಿದೆ.

7. ಮಹಾವಿದ್ಯಾಯದ ಪ್ರಾಚಾರ್ಯರು ಎಲ್ಲ ವಿದ್ಯಾರ್ಥಿಗಳ ಮಾಹಿತಿಯ ಯಾದಿಯೊಂದಿಗೆ ಪರೀಕ್ಷಾ ಅರ್ಜಿಗಳನ್ನು (ಹಾರ್ಡಕಾಫಿ) ಅವಶ್ಯ ದಾಖಲೆಗಳೊಂದಿಗೆ/ನಕಲು (ಝರಾಕ್ಸ್) ಅಂಕಪಟ್ಟಿಗಳೊಂದಿಗೆ ನೇರವಾಗಿ ಸಂಬಂಧಪಟ್ಟ ಕಚೇರಿ ಅಧೀಕ್ಷಕರು, ಪರೀಕ್ಷಾ ವಿಭಾಗ, ವಿಶ್ವಚೇತನ ಬಿಲ್ಡಿಂಗ್, ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ–580003 ಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಮಹಾವಿದ್ಯಾಲಯದವರು ಸಲ್ಲಿಸುವುದು.

8. ಅಂತರ್ಜಾಲದ ಪರೀಕ್ಷಾ ಅರ್ಜಿ ನಮೂನೆಗಳನ್ನು ತುಂಬಿಸುವಾಗ ತಿದ್ದುಪಡಿಯನ್ನು ತಪ್ಪಿಸಲು ಮಹಾವಿದ್ಯಾಲಯದ ಸಿಬ್ಬಂದಿಗಳು ವಿದ್ಯಾರ್ಥಿಗಳಿಗೆ ನಿರ್ದೇಶನ ನೀಡುವುದು ಯಾವುದೇ ತಿದ್ದುಪಡಿಗಳು / ತಪ್ಪುಗಳು ಉಂಟಾದರೆ ಮಹಾವಿದ್ಯಾಲಯಗಳೆ ಜವಾಬ್ದಾರರಾಗಿರುತ್ತಾರೆ.

9. ಪರೀಕ್ಷೆಗೆ ಸಂಬಂದಿಸಿದಂತೆ ಶುಲ್ಕಗಳನ್ನು ವಿಶ್ವವಿದ್ಯಾಲಯಕ್ಕೆ ಭರಣ ಮಾಡಿದ ನಂತರ ಯಾವುದೇ ಕಾರಣಕ್ಕೂ ಮರಳಿ ಕೊಡುವದಿಲ್ಲ.

19/2

ಕುಲಸಚಿವರು(ಮೌಲ್ಯಮಾಪನ)

**ಪ್ರತಿಗಳು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ:**

1) ಕವಿವಿ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ.
2) ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3) ಅಭಿವೃದ್ಧಿ ಅಧಿಕಾರಿಗಳು, ಅಂಕಿ ಸಂಖ್ಯೆ ವಿಭಾಗ/ ಶಿಷ್ಯವೇತನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4) ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ,/ಎಸ್‌ಸಿ/ಎಸ್‌ಟಿ/ಕೆ–1/ಒಬಿಸಿ ಘಟಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5) ನಿರ್ದೇಶಕರು ಮಾಹಿತಿ ತಂತ್ರಜ್ಞಾನ ವಿಭಾಗ ಕ.ವಿ.ವಿ. ಧಾರವಾಡ. **(ಅಧಿಸೂಚನೆಯನ್ನು ಅಂತರ್ಜಾಲದಲ್ಲಿ ವಿತರಿಸುವುದು.)**
6) ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ)/ವಿತ್ತಾಧಿಕಾರಿಗಳು, ಕ ವಿ ವಿ, ಧಾರವಾಡ.
7) ಸಿಸ್ಟಮ್ ಎನಾಲಿಸ್ಟ್, ಪರೀಕ್ಷಾ ಗಣಕಯಂತ್ರ ವಿಭಾಗ, ಕ.ವಿ.ವಿ. ಧಾರವಾಡ.
8) ಉಪಕುಲಸಚಿವರು/ ಸಹಾಯಕ ಕುಲಸಚಿವರು, ಪರೀಕ್ಷಾ/ ಹಣಕಾಸು/ ವಿದ್ಯಾಮಂಡಳ ವಿಭಾಗ, ಕ ವಿ ವಿ, ಧಾರವಾಡ.
9) ಅಧೀಕ್ಷಕರು, ಹಣಕಾಸು/ ವಿದ್ಯಾಮಂಡಳ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
10) ಅಧೀಕ್ಷಕರು, ಗೌಪ್ಯ/ ಪ್ರಶ್ನೆಪತ್ರಿಕೆ/ ಬಿ.ಎ./ಬಿ.ಕಾಂ./ಬಿ.ಎಸ್.ಸಿ./ಕಾನೂನು/ಘಟಿಕೋತ್ಸವ ಪರೀಕ್ಷಾ ವಿಭಾಗ, ಕ ವಿ ವಿ, ಧಾರವಾಡ.

## ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

## ಪರೀಕ್ಷಾ ವಿಭಾಗ

**ಮಹಾವಿದ್ಯಾಲಯದ ಹೆಸರು ಮತ್ತು ಕೋಡ್ ಸಂಖ್ಯೆ :**

**ಕೋರ್ಸ :** **ಸೆಮಿಸ್ಟರ್ :** **ನಿಯಮಿತ : (Regular)**

| ಅ.ಸಂ | ವಿವರ | ವಿದ್ಯಾರ್ಥಿಗಳ ಸಂಖ್ಯೆ | ಆನ್‌ಲೈನ್ ಪರೀಕ್ಷಾ ಅರ್ಜಿ ಶುಲ್ಕ | ಅಂಕಪಟ್ಟಿ ಶುಲ್ಕ | ಪಾಸಾದ ಪ್ರಮಾಣ ಪತ್ರದ ಶುಲ್ಕ | ಪ್ರೋಜಕ್ಟ/ವೈವಾ (ಅನ್ವಯಿಸುವ ಕೋರ್ಸಗಳಿಗೆ) ಶುಲ್ಕ | ಒಟ್ಟು ವಿಷಯಗಳ ಸಂಖ್ಯೆ | ಪರೀಕ್ಷಾ ಶುಲ್ಕ | ಒಟ್ಟು ಶುಲ್ಕ | ದಂಡದ ಶುಲ್ಕ | ಒಟ್ಟು ಶುಲ್ಕ | ರಿಯಾಯಿತಿ ನೀಡಿದ ಪರೀಕ್ಷಾ ಶುಲ್ಕ |
|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | | | 9 | 10 | 11 |
| 1 | ಸಾಮಾನ್ಯ | | X 90 = | X 130 = | X 175 = | X 485 = | | 715=<br>660=<br>440=<br>220= | | X 165 = | | -- |
| 2 | ಪ.ಜಾ. | | X 90 = | X 130 = | X 175 = | X 485 = | | -- | | X 165 = | | X 000= |
| 3 | ಪ.ಪಂ. | | X 90 = | X 130 = | X 175 = | X 485 = | | -- | | X 165 = | | X 000 = |
| 4 | ಪ್ರ.ವರ್ಗ – 1 | | X 90 = | X 130 = | X 175 = | X 485 = | | -- | | X 165 = | | X 000 = |
| 5 | ಹಿಂದುಳಿದ ವರ್ಗ (2A,2B,3A, 3B) | | X 90 = | X 130 = | X 175 = | X 485 = | | -- | | X 165 = | | X 000 = |
| | ಒಟ್ಟು | | **X 90 =** | X 130 **=** | X 175 = | **X 485 =** | | -- | | X 165 = | | **X 000 =** |

1) ಪ.ಜಾ./ಪ.ಪಂ./ಪ್ರ.ವರ್ಗ–1/ಹಿ.ವರ್ಗ–(2A,2B,3A,3B) : ರಿಯಾಯಿತಿ ನೀಡಿದ ಒಟ್ಟು ಪರೀಕ್ಷಾ ಶುಲ್ಕ ರೂ.:

2) ಆನ್‌ಲೈನ್ ಮೂಲಕ ತುಂಬಿದ ಚಲನ್ ಸಂಖ್ಯೆ : ದಿನಾಂಕ : ರೂ.:

ಟಿಪ್ಪಣೆ : 1) ನಿಯಮಿತ ಹಾಗೂ ಅನಿಯಮಿತ ವಿದ್ಯಾರ್ಥಿಗಳ ಯಾದಿ ಪ್ರತ್ಯೇಕವಾಗಿ ಸಲ್ಲಿಸುವದು.

2) ಪ್ರತಿ ಸೆಮಿಸ್ಟರ್‌ನ ಮಾಹಿತಿಯನ್ನು ಪ್ರತ್ಯೇಕವಾಗಿ ಸಲ್ಲಿಸುವದು.

3) ನಿಯಮಿತ / ಅನಿಯಮಿತ (Regular / Repeater)